ಇ) ಈ ಬಾಬ್ತಿಗಾಗಿ ಸದರಿ ಮೂರು ವರ್ಷಗಳಲ್ಲಿ ವೆಚ್ಚ ಮಾಡದೆ ಇರುವ ಹಣ ರೂ. 29.95 ಲಕ್ಷಗಳಾಗಿದ್ದು, ಆರ್ಥಿಕ ವರ್ಗಕ್ಕೆ ಅಂತ್ಯ ಗೊಂಡಂತೆ ಲುಪ್ತವಾಗಿರುತ್ತದೆ. ಆದುದರಿಂದ ಈ ಹಣವನ್ನು ಖರ್ಚು ಮಾಡಲು ಬರುವುದಿಲ್ಲ.

ಧಾರವಾಡ ಜಿಲ್ಲೆಯಲ್ಲಿ ಹನಿ ನೀರಾವರಿ ಸಬ್ಸಿಡಿ ಹಣ ದುರುಪಯೋಗ

2991 - ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡ ಜಿಲ್ಲೆಯಲ್ಲಿ ಹನಿ ನೀರಾವರಿಗೆಂದು ನೀಡಿದ ಸಬ್ಸಿಡಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ದುರುಪಯೋಗವಾಗಿರುವ ಹಣವೆಷ್ಟು? ಹಣ ದುರುಪಯೋಗಕ್ಕೆ ಕಾರಣರಾದವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)*

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಹೌದು.

ಆ) ರೂ. 7.30 ಲಕ್ಷ ಸರ್ಕಾರಿ ಹಣ ದುರುಪಯೋಗವಾಗಿದ್ದು ಈ ಅವ್ಯವಹಾರಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ಸರ್ಕಾರಿ ಹಣ ದುರುಪಯೋಗದ ಹಿನ್ನಲೆಯಡಿ ಅಮಾನತ್ತು ಗೊಳಿಸಿ ಇಲಾಖಾ ವಿಚಾರಣೆಗೆ ಕ್ರಮಕೈಗೊಂಡಿದೆ.

ರಾಜ್ಯದಲ್ಲಿ ಶೈತ್ಯಾಗಾರಗಳ ಸ್ಥಾಪನೆ

2992 - ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ 1994 ರಿಂದೀಚೆಗೆ ಎಷ್ಟು ಶೈತ್ಯಾಗಾರಗಳನ್ನು ಸ್ಥಾಪಿಸಲಾಗಿದೆ? (ಅವುಗಳ ವಿವರ ನೀಡುವುದು)*

ಆ) *ರಾಜ್ಯದಲ್ಲಿ ಇನ್ನೂ ಎಷ್ಟು ಕೇಂದ್ರಗಳಲ್ಲಿ ಶೈತ್ಯಾಗಾರಗಳ ಸ್ಥಾಪನೆ ಮಾಡಲಿದೆ? ಅವುಗಳಿಗೆ ಎಷ್ಟು ಹಣ ಮೀಸಲಿಡಲಾಗಿದೆ? ಹಾಗೂ ಎಷ್ಟು ಸಮಯದಲ್ಲಿ ಕೆಲಸ ಪೂರ್ಣಗೊಳಿಸಲಾಗುವುದು?*

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ 1994ರಿಂದೀಚೆಗೆ 8 ಶೈತ್ಯಾಗಾರಗಳನ್ನು ತೋಟಗಾರಿಕೆ ಉತ್ಪನ್ನಗಳ ಶೇಖರಣೆಗಾಗಿ ನಿರ್ಮಿಸಲಾಗಿದೆ. ಅವುಗಳ ವಿವರ ಕೆಳಕಂಡಂತಿದೆ :

ಸಂಸ್ಥೆ	ಸ್ಥಳ	ಸಾಮರ್ಥ್ಯ (ಟನ್‌ಗಳಲ್ಲಿ)
1) ಅಥಣಿ ತಾಲ್ಲೂಕು ದ್ರಾಕ್ಷಿ ಬೆಳೆಗಾರರ ಸಂಸ್ಕರಣೆ ಮತ್ತು ರಫ್ತು ಸಹಕಾರ ಸಂಘ	ಅಥಣಿ	500 (ದ್ರಾಕ್ಷಿ)
2) ಬಿಜಾಪುರ ಜಿಲ್ಲಾ ತೋಟಗಾರಿಕೆ ಉತ್ಪನ್ನಗಳ ಬೆಳೆಗಾರರ ಸಹಕಾರ ಮಾರಾಟ ಮತ್ತು ಸಂಸ್ಕರಣಾ ಸಂಸ್ಥೆ	ಬಿಜಾಪುರ	500 (ದ್ರಾಕ್ಷಿ ಮತ್ತು ದಾಳಿಂಬೆ)
3) ಘಟಪ್ರಭಾ ತೋಟಗಾರಿಕೆ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣಾ ಸಹಕಾರ ಸಂಘ	ಬಾಗಲಕೋಟೆ	500 (ದ್ರಾಕ್ಷಿ)
4) ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ	ಕೋಲಾರ	2500 (ಆಲೂಗಡ್ಡೆ, ಹುಣಸೇಹಣ್ಣು ಇತರೆ)
5) ವಿನಾಯಕ ಕೋಲ್ಡ್ ಸ್ಟೋರೇಜ್	ಯಶವಂತಪುರ ಬೆಂಗಳೂರು	3000 (ಆಲೂಗಡ್ಡೆ, ಸೇಬು, ಇತರೆ)
6) ಕಾವೇರಿ ಕೋಲ್ಡ್ ಸ್ಟೋರೇಜ್	ಯಶವಂತಪುರ ಬೆಂಗಳೂರು	1500 (ಆಲೂಗಡ್ಡೆ, ಸೇಬು ಇತರೆ,
7) ಭವಾನಿ ಕೋಲ್ಡ್ ಸ್ಟೋರೇಜ್	ಯಶವಂತಪುರ ಬೆಂಗಳೂರು	1500 (ಆಲೂಗಡ್ಡೆ, ಸೇಬು, ಇತರೆ)
8) ಸೌರಬ್ ಕೋಲ್ಡ್ ಸ್ಟೋರೇಜ್	ಬೆಳಗಾಂ	1500 (ದ್ರಾಕ್ಷಿ ಆಲೂಗಡ್ಡೆ ಹುಣಸೆ, ದಾಳಿಂಬೆ ಮಾವು)

ಆ) ತೋಟಗಾರಿಕೆ ಇಲಾಖೆ ವತಿಯಿಂದ ರಾಜ್ಯದಲ್ಲಿ 10 ಜಿಲ್ಲೆಗಳಲ್ಲಿ 16 ಕೇಂದ್ರಗಳಲ್ಲಿ ಇನ್ನೂ 16 ಶೀತಲ ಗೃಹಗಳನ್ನು ಒಟ್ಟು 1239.4 ಲಕ್ಷ ರೂಗಳ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಅವುಗಳ ಒಟ್ಟು ಸಾಮರ್ಥ್ಯ 8000 ಸಾವಿರ ಟನ್‌ಗಳು.

ಈ ಉದ್ದೇಶಕ್ಕಾಗಿ ಶೀತಲ ಗೃಹಗಳು, ಸೇರಿದಂತೆ ಇತರೆ ಮಾರುಕಟ್ಟೆ ಮೂಲ ಸೌಲಭ್ಯಗಳನ್ನು ರಾಜ್ಯಾದ್ಯಂತ ನಿರ್ಮಿಸಲು ಸಮಗ್ರ ಯೋಜನೆಯನ್ನು ರೂಪಿಸಿದ್ದು, ಅದರ ಒಟ್ಟು ವೆಚ್ಚ 66 ಕೋಟಿ ರೂಗಳಾಗಿದ್ದು, ಈ ಯೋಜನೆಯನ್ನು ಎನ್.ಸಿ.ಡಿ.ಸಿ. ಮಂಜೂರಾತಿಗಾಗಿ ನವದೆಹಲಿಗೆ ಕಳುಹಿಸಲಾಗಿದೆ. ಆದರೆ ಈ ಕಾರ್ಯಕ್ರಮಕ್ಕೆ ನಿರ್ದಿಷ್ಟ ಸಮಯ ಗೊತ್ತುಪಡಿಸಲು ಸಾಧ್ಯವಿರುವುದಿಲ್ಲ. ಅದಾಗ್ಯೂ ಮಂಜೂರಾತಿ ದೊರೆತಲ್ಲಿ ಶೈತ್ಯಾಗಾರ ನಿರ್ಮಾಣಕ್ಕೆ ಕ್ರಮಕೈಗೊಂಡು ಮೂರು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.